## ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ, ವಿರಾಜಪೇಟೆ

**ಉಪಸ್ಥಿತರುಃ ಪ್ರದೀಪ ಪೋತದಾರ,ಬಿ.ಕಾಂ , ಎಲ್.ಎಲ್.ಬಿ.,**

## ಸಿ. ಸಿ. ನಂ. 11/2025

**ಪಿರ್ಯಾದಿಃ** ಶ್ರೀ ಪ್ರದೀಪ್ ಕುಮಾರ್ ಕೆ.ಕೆ, ತಂದೆಃ ಕೃಷ್ಣಯ್ಯ ಕೆ.ಎಸ್ ,
ಪ್ರಾಯ 53 ವರ್ಷ, ವಾಸಃ ಕೊಕೇರಿ ಗ್ರಾಮ,
ಮಡಿಕೇರಿ ತಾಲ್ಲೂಕು, ಕೊಡಗು ಜಿಲ್ಲೆ.

(ಶ್ರೀ ಬಿ.ಎಸ್ ಪುಷ್ಪರಾಜ್, ವಕೀಲರು,ವಿರಾಜಪೇಟೆ.)

**ವಿರುದ್ಧ**

**ಆರೋಪಿಃ** ಶ್ರೀಮತಿ ಮೈಮುನ ಕೆ.ಎಸ್,
ಗಂಡಃ ಖರೀಮ್ ಪಿ.ಎ, ಪ್ರಾಯ 47 ವರ್ಷ
ಮಾಲೀಕರು ಜಹನ್ಸ್ ಹೋಟೇಲ್,
ವಾಸಃಅರಪಟ್ಟು ಗ್ರಾಮ ಮತ್ತು ಅಂಚೆ,
ಮಡಿಕೇರಿ ತಾಲ್ಲೂಕು, ಕೊಡಗು ಜಿಲ್ಲೆ.

(ಶ್ರೀ ಕೆ.ಎಂ ಅಜುರುದ್ದೀನ್ , ವಕೀಲರು,ವಿರಾಜಪೇಟೆ.)

**<u>::ಆಪಾದನೆಯ ಸಾರಾಂಶ::</u>**

ಏನೆಂದರೆ, ಆರೋಪಿಯಾದ ನೀವು ಹಾಗೂ ಪಿರ್ಯಾದಿಯವರು ಕೆಲವು ವರ್ಷಗಳಿಂದ ಪರಿಚಯಸ್ಥರಾಗಿದ್ದು, ಜುಲೈ 2024 ರಂದು 2 ಮತ್ತು 3 ನೇ ವಾರದಲ್ಲಿ ಆರೋಪಿಯಾದ ನೀವು ಪಿರ್ಯಾದಿಯವರಿಂದ ರೂ.1,10,000/- ಹಣವನ್ನು ಕೈ ಸಾಲವಾಗಿ ಪಡೆದುಕೊಂಡಿದ್ದು, ಸದರಿ ಹಣವನ್ನು ತೀರಿಸುವ ಸಲುವಾಗಿ ಆರೋಪಿಯಾದ ನೀವು ನಿಮ್ಮ ಬ್ಯಾಂಕ್ ಖಾತೆಗೆ ಸಂಬಂಧಿಸಿದ ಚೆಕ್ ಸಂಖ್ಯೆ 344321, ರೂ.1,10,000/- ದಿನಾಂಕ 28.10.2024 ರಂದು ಚೆಕ್ಕನ್ನು ನಮೂದಿಸಿ ಕೆನರಾ ಬ್ಯಾಂಕ್, ಅರಪಟ್ಟು ಶಾಖೆಯ, ಚೆಕ್ಕನ್ನು ಪಿರ್ಯಾದಿಗೆ ನೀಡಿದ್ದು, ಪಿರ್ಯಾದಿಯವರು ನಗಧೀಕರಿಸುವ ಸಲುವಾಗಿ ಕೆನರಾ ಬ್ಯಾಂಕ್, ಅರಪಟ್ಟು ಶಾಖೆಯ ಮೂಲಕ ಸಲ್ಲಿಸಿದಾಗ, ಸದರಿ ಚೆಕ್ " **Funds Insufficient**" ಎಂಬ ಕಾರಣ ನಮೂದಿಸಿ ದಿನಾಂಕಃ 29.10.2024 ರಂದು ಬ್ಯಾಂಕ್ ಹಿಂಬರಹದೊಂದಿಗೆ ಅಮಾನ್ಯಗೊಂಡ ಚೆಕ್ ಹಿಂದಿರುಗಿಸಿರುತ್ತಾರೆ. ಚೆಕ್ ನಗದಾಗದೇ ಮರಳಿ ಬಂದ ನಂತರ ಪಿರ್ಯಾದಿ ನಿಮಗೆ ನೋಂದಾಯಿತ ಅಂಚೆಯ ಮೂಲಕ ತಮ್ಮ ವಕೀಲರಿಂದ ದಿನಾಂಕಃ 11.11.2024 ರಂದು ನೋಟೀಸ್ ಕಳುಹಿಸಿ ಚೆಕ್‌ನ ಹಣವನ್ನು ತಮಗೆ ಪಾವತಿಸಬೇಕೆಂದು ತಗಾದೆ ಮಾಡಿರುತ್ತಾರೆ. ಸದರಿ

ನೋಟಿಸ್ ನಿಮಗೆ ಜಾರಿಯಾಗಿದ್ದರೂ ಸಹ ನೀವು ಚೆಕ್‌ನ ಮೊತ್ತವನ್ನು ಪಿರ್ಯಾದಿ ಬ್ಯಾಂಕಿಗೆ ಪಾವತಿಸಿರುವುದಿಲ್ಲ ಆ ಮೂಲಕ ನೀವು ವರ್ಗಾವಣೀಯ ಲಿಖಿತಗಳ ಕಾಯಿದೆ 1881 ರ ವಿಧಿ 138 ರ ರೀತ್ಯಾ ದಂಡನೀಯವಾದ ಅಪರಾಧವೆಸಗಿರುವುದಾಗಿ ನಿಮ್ಮ ವಿರುದ್ಧ ಆಪಾದನೆ ಇದೆ.

ಪ್ರಶ್ನೆಃ 1. ಮೇಲೆ ಓದಿ ಹೇಳಿದ ಆಪಾದನೆಯ ಸಾರಾಂಶ ಅರ್ಥವಾಯಿತೆ?

ಉತ್ತರಃ yes

ಪ್ರಶ್ನೆಃ 2. ಮೇಲೆ ಓದಿ ಹೇಳಿದ ಆಪಾದನೆಯ ಸಾರಾಂಶವನ್ನು ಒಪ್ಪಿಕೊಳ್ಳುವಿರಾ ಅಥವಾ ವಿಚಾರಣೆಯಾಗಬೇಕೇ?

ಉತ್ತರಃAccused pleaded not guilty.

(ಮೇಲಿನ ಆಪಾದನೆಯ ಸಾರಾಂಶವನ್ನು ಓದಿ, ತಿಳಿ ಹೇಳಿದ ನಂತರ ಆರೋಪಿ ಅದನ್ನು ಅರ್ಥೈಸಿಕೊಂಡು ನಂತರ ನೀಡಿದ ಉತ್ತರಗಳನ್ನು ನಾನೇ ಸ್ವತಃ ದಾಖಲು ಮಾಡಿದ್ದೇನೆ. ಸದರಿ ದಾಖಲೆಯು ಸರಿಯಾದುದು ಮತ್ತು ನಿಜವಾದುದು ಎಂದು ದೃಢೀಕರಿಸುತ್ತೇನೆ.)

sd/-

**(ಪ್ರದೀಪ ಪೋತದಾರ)**

**ದಿನಾಂಕಃ08.07.2025** **C/C ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ,**

**ವಿರಾಜಪೇಟೆ.**